# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority


ಸಂಖ್ಯೆ :
No. ಬೆಂ.ಅ.ಪ್ರಾ/ಅಸ/ಅಅ-3/ತಾಸ-4/ಪ್ರಾಪ್ರಪ/ಟ-396 /2016-17.

ದಿನಾಂಕ :
Date : 21/01/2017

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಅನುಸೂಚಿ-7
(ಉಪವಿಧಿ ಸಂಖ್ಯೆ: 5.3)
**ಪ್ರಾರಂಭಿಕ ಪ್ರಮಾಣ ಪತ್ರ**

ಇವರಿಗೆ,

ಮೆ॥ ಜಿ ಕಾರ್ಪ್ ಸ್ಪೇಸಸ್ ಪ್ರೈವೇಟ್ ಲಿಮಿಟೆಡ್,
ನಂ. 21/19, ಕ್ರೈಗ್ ಪಾರ್ಕ್ ಬಡಾವಣೆ,
ಎಂ.ಜಿ. ರಸ್ತೆ, ಬೆಂಗಳೂರು 560001.

ಮಾನ್ಯರೆ,

ವಿಷಯ: ಕಾಮಗಾರಿಯ ಆರಂಭದ ಬಗ್ಗೆ ಬೆಂಗಳೂರು ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಶಿನಿವಾಗಿಲು ಅಮಾನಿಕೆರೆ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ "ದಿ ಶಾಂತಿನಗರ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ" ವಸತಿ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ: 101 ರಿಂದ 112 ರಲ್ಲಿನ ಬ್ಲಾಕ್-ಎ ರಲ್ಲಿ 2ತಳ+ನೆಲ+14 ಮೇಲಂತಸ್ತುಗಳನ್ನೊಳಗೊಂಡ 98 ವಸತಿ ಘಟಕಗಳು, ಬ್ಲಾಕ್-ಬಿ ರಲ್ಲಿ 2ತಳ+ನೆಲ+08 ಮೇಲಂತಸ್ತುಗಳನ್ನೊಳಗೊಂಡ 38 ವಸತಿ ಘಟಕಗಳು ಮತ್ತು ಬ್ಲಾಕ್-ಸಿ ರಲ್ಲಿ 2ತಳ+ನೆಲ+14 ಮೇಲಂತಸ್ತುಗಳನ್ನೊಳಗೊಂಡ 98 ವಸತಿ ಘಟಕಗಳು ಒಟ್ಟು 234 ವಸತಿ ಘಟಕಗಳ ಬಹುಮಹಡಿ ವಸತಿ ಕಟ್ಟಡಗಳಿಗೆ ಅನುಮತಿ ನೀಡುವ ಕುರಿತು.

ಉಲ್ಲೇಖ:
1. ಮಂಜೂರಾತಿಯಾದ ನಕ್ಷೆ ಸಂಖ್ಯೆ: ಬೆಂ.ಅ.ಪ್ರಾ/ನಮ/ಅ.ಸ/ಅ.ಅ-3/ತಾ.ಸ-4/ಪೂ/43/2015-16, ದಿನಾಂಕ: 20.10.2015
2. ನಿಮ್ಮ ಅರ್ಜಿ ದಿನಾಂಕ: 03.08.2016
3. ಮಾನ್ಯ ಆಯುಕ್ತರು ರವರ ಆದೇಶ ಸಂಖ್ಯೆ: 4400, ದಿನಾಂಕ: 19.01.2017.

********

ಬೆಂಗಳೂರು ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಶಿನಿವಾಗಿಲು ಅಮಾನಿಕೆರೆ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ "ದಿ ಶಾಂತಿನಗರ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ" ವಸತಿ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ: 101 ರಿಂದ 112 ರಲ್ಲಿನ ಬ್ಲಾಕ್-ಎ ರಲ್ಲಿ 2ತಳ+ನೆಲ+14 ಮೇಲಂತಸ್ತುಗಳನ್ನೊಳಗೊಂಡ 98 ವಸತಿ ಘಟಕಗಳು, ಬ್ಲಾಕ್-ಬಿ ರಲ್ಲಿ 2ತಳ+ನೆಲ+08 ಮೇಲಂತಸ್ತುಗಳನ್ನೊಳಗೊಂಡ 38 ವಸತಿ ಘಟಕಗಳು ಮತ್ತು ಬ್ಲಾಕ್-ಸಿ ರಲ್ಲಿ 2ತಳ+ನೆಲ+14 ಮೇಲಂತಸ್ತುಗಳನ್ನೊಳಗೊಂಡ 98 ವಸತಿ ಘಟಕಗಳು ಒಟ್ಟು 234 ವಸತಿ ಘಟಕಗಳ ಬಹುಮಹಡಿ ವಸತಿ ಕಟ್ಟಡಗಳ ನಕ್ಷೆಗೆ ಎಲ್.ಪಿ. ಸಂಖ್ಯೆ: ಬೆಂ.ಅ.ಪ್ರಾ/ನಮ/ಅ.ಸ/ಅ.ಅ-3/ತಾ.ಸ-4/ಪೂ/43/2015-16, ದಿನಾಂಕ: 20.10.2015 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾತಿ ನೀಡಲಾಗಿದೆ. ಮುಂದುವರೆದಂತೆ ಉಲ್ಲೇಖ(2)

ಪುಟ ಸಂಖ್ಯೆ (2) ಕ್ಕೆ ಮುಂದುವರೆದಿದೆ.....

ರ ಅರ್ಜಿಯಂತೆ, ಪ್ರಾಧಿಕಾರದಿಂದ ಉಲ್ಲೇಖ (1) ರಲ್ಲಿ ನೀಡಲಾಗಿರುವ ಮಂಜೂರಾತಿಯಂತೆ ಬಹುಮಹಡಿ ವಸತಿ ಕಟ್ಟಡದ ಆವರಣವನ್ನು ಕಾರ್ಯಪಾಲಕ ಅಭಿಯಂತರರು (ಪೂರ್ವ) ರವರು ದಿನಾಂಕ: **20.08.2016** ರಂದು ತನಿಖೆ ನಡೆಸಲಾಗಿ ಮತ್ತು ಗುರುತು ಮಾಡಿ ನಿರ್ಮಿಸಿದ ಅಡಿಪಾಯವನ್ನು ಗುರುತು ಮಾಡಿದ, ಕೂಡಿಸಿದ ಅಂಕಣವನ್ನು ಹೋಲಿಸಿ ಪರಿವೀಕ್ಷಿಸಿ ಕಾಮಗಾರಿ ಕೆಲಸ ಪ್ರಾರಂಭಿಸಿರುವ **"ಬಹುಮಹಡಿ ವಸತಿ"** ಕಟ್ಟಡಗಳ ಕಾಮಗಾರಿಯು ಮಂಜೂರಾದ ನಕ್ಷೆಯ ಮೇರೆಗೆ ಇದ್ದುದು ಕಂಡು ಬಂದಿದೆ.

ಮುಂದುವರೆದಂತೆ, ಅರ್ಜಿದಾರರು ಚಲನ್ ಸಂಖ್ಯೆ: **13471**, ದಿನಾಂಕ: **21.01.2017** ರಂದು ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಶುಲ್ಕವಾದ ರೂ. **1,33,561/-** ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಆದರಂತೆ ಸದರಿ **"ಬಹುಮಹಡಿ ವಸತಿ"** ಕಟ್ಟಡಗಳ ಕಾಮಗಾರಿಯನ್ನು ಮುಂದುವರೆಸಲು ಈ ಕೆಳಕಂಡ ಷರತ್ತುಗೊಳಪಡಿಸಿ ಅನುಮತಿ ನೀಡಿದೆ.

1. ಕಾಮಗಾರಿಯಲ್ಲಿ ಯಾವುದೇ ಮಿತಿಮೀರುವಿಕೆ, ಬದಲಾವಣೆಗಳನ್ನು ಮಾಡದೆ ಅಥವಾ ನಿಯಮ ಉಪವಿಧಿಯನ್ನು ಉಲ್ಲಂಘಿಸದಂತೆ ಮಂಜೂರಾದ ಯೋಜನೆಯ ಪ್ರಕಾರ ಕಟ್ಟು ನಿಟ್ಟಾಗಿ ಕಾಮಗಾರಿಯನ್ನು ನಡೆಸತಕ್ಕದ್ದು.
2. ಕಾಮಗಾರಿಯು, ಅಂಕಣಗಳನ್ನು ಮಾಡಿಸುವ ಕಾರ್ಯ ಮುಕ್ತಾಯವಾದ ಹಂತವನ್ನು ತಲುಪಿದಾಗ, ಕಾರ್ಯ ಪ್ರಗತಿಯ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸುವ ಮೂಲಕ ಮಂಜೂರಾದ ನಕ್ಷೆ, ನಿಯಮಗಳು ಉಪವಿಧಿಗಳ ಮೇರೆಗೆ ನಿರ್ಮಾಣ ಕಾರ್ಯವು ನಡೆದಿರುವ ಬಗ್ಗೆ ಪರೀಕ್ಷೆ ನಡೆಸಲು ಪ್ರಾಧಿಕಾರಕ್ಕೆ ಅನುಕೂಲ ಕಲ್ಪಿಸಿ ಕೊಡಬೇಕು.
3. ನಕ್ಷೆ ಮಂಜೂರಾತಿಯಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ತಪ್ಪಿದ್ದಲ್ಲಿ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ರದ್ದು ಪಡಿಸುವುದಲ್ಲದೇ ಸ್ವಾಧೀನಾನುಭವ ಪತ್ರವನ್ನು ನೀಡಲಾಗುವುದಿಲ್ಲ.

**ಆಯುಕ್ತರ ಪರವಾಗಿ**
**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**
**ಬೆಂಗಳೂರು.**

ಪ್ರತಿಯನ್ನು ಕಾರ್ಯಪಾಲಕ ಅಭಿಯಂತರರು (ಪೂ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.